1598(2034) ಶ್ರೀ ಕೃಷ್ಣಪ್ಪ. ಎಂ.ಟಿ. (ತುರುವೇಕೆರೆ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಟೌನ್ ಮುನಿಸಿಪಾಲಿಟಿ ಮತ್ತು ಪಟ್ಟಣ ಪಂಚಾಯತಿ ಪ್ರದೇಶಗಳ ಅಭಿವೃದ್ಧಿಗಾಗಿ ಕೈಗೊಂಡಿರುವ ವಿಶೇಷ ಕ್ರಮಗಳೇನು ;

2. ಈ ಉದ್ದೇಶಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿದ, ವೆಚ್ಚ ಮಾಡಿದ ಹಣವೆಷ್ಟು ;

3. ಈ ಎಲ್ಲಾ ಪ್ರದೇಶಗಳನ್ನು ಒಳಚರಂಡಿ ವ್ಯವಸ್ಥೆಗೆ ಒಳಪಡಿಸಲು ಬೇಕಾಗುವ ಹಣವೆಷ್ಟು ಹಾಗೂ ಯಾವಾಗ ಈ ಕಾರ್ಯವನ್ನು ಮಾಡಲಾಗುವುದು ?

ಶ್ರೀ. ಎಸ್. ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ.):

1. 11 ನೇ ಹಣಕಾಸು ಯೋಜನೆಯಡಿಯಲ್ಲಿ ಪ್ರತಿವರ್ಷ ಪ್ರತಿ ಟೌನ್ ಮುನಿಸಿಪಾಲಿಟಿಗೆ ರೂ. 18.00 ಲಕ್ಷ ಮತ್ತು ಪಟ್ಟಣ ಪಂಚಾಯತಿಗೆ ರೂ.11.03 ಲಕ್ಷ ವಿಶೇಷ ಯೋಜನೆಗಳಿಗಾಗಿ 5 ವರ್ಷಗಳ ಕಾಲ ಒದಗಿಸಲಾಗುತ್ತಿದೆ.

ವಿಶೇಷ ಯೋಜನೆಗಳು ಈ ಕೆಳಕಂಡಂತಿವೆ.

1. ರಸ್ತೆ ರಿಪೇರಿ
2. ನೀರಿನ ಸೌಕರ್ಯ ಕಲ್ಪಿಸುವುದು
3. ಆರೋಗ್ಯ ಸುಧಾರಣೆ, ಇತ್ಯಾದಿ.

2. ಪ್ರತಿ ಟೌನ್ ಮುನಿಸಿಪಾಲಿಟಿಗೆ ರೂ. 54.00 ಲಕ್ಷ ಪ್ರತಿ ಪಟ್ಟಣ ಪಂಚಾಯತಿಗೆ ರೂ. 33.09 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

3. ಪ್ರತಿ ನಗರ ಸ್ಥಳೀಯ ಸಂಸ್ಥೆಗೆ ಅಂದಾಜು ರೂ. 2.50 ರಿಂದ 3.00 ಕೋಟಿಗಳು ಬೇಕಾಗುತ್ತದೆ.

ಸಮರ್ಪಕ ನೀರು ಸರಬರಾಜು ವ್ಯವಸ್ಥೆ ಇರುವ ಕಡೆ ಮಾತ್ರ ಈ ಯೋಜನೆ ಯಶಸ್ವಿಯಾಗುತ್ತದೆ. ಒಳಚರಂಡಿ ವ್ಯವಸ್ಥೆಯನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಂತ ಹಂತವಾಗಿ ಹಮ್ಮಿಕೊಳ್ಳಲಾಗುವುದು.

1599(2007) ಶ್ರೀ. ಕ್ಯಾತ್‌ಸಂದ್ರ ಎನ್.ರಾಜಣ್ಣ (ಬೆಳ್ಳಾವಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವೆರೇ?

ಅ. ಕಾವೇರಿ ನೀರಾವರಿ ನಿಗಮದ ವತಿಯಿಂದ ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ತೆಗೆದು ಕೊಂಡಿರುವ ಕಾಮಗಾರಿಗಳ ಬಾಕಿ ಬಿಲ್ಲುಗಳ ಮೊತ್ತವೆಷ್ಟು: (ಕಳೆದ ಮೂರು ವರ್ಷವಾರು ವಿವರ ನೀಡುವುದು) ;

ಆ. ತುಮಕೂರು ಜಿಲ್ಲೆಯಲ್ಲಿ ಕಾವೇರಿ ನೀರಾವರಿ ನಿಗಮದ ವತಿಯಿಂದ ತೆಗೆದು ಕೊಂಡಿರುವ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ, ಸ್ಥಗಿತಗೊಂಡಿರುವ ಕಾಮಗಾರಿಗಳನ್ನು ಮುಗಿಸಲು ಸರ್ಕಾರಕ್ಕೆ ಬೇಕಿರುವ ಕಾಲಾವಕಾಶವೆಷ್ಟು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ. ಕಾವೇರಿ ನೀರಾವರಿ ನಿಗಮದಡಿ ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳ ವರ್ಷವಾರು (ಕಳೆದ ಮೂರು ವರ್ಷಗಳ) ಬಾಕಿ ಬಿಲ್ಲುಗಳ

ಮೊತ್ತದ ವಿವರಗಳು ಕೆಳಕಂಡಂತಿವೆ. (ರೂ. ಲಕ್ಷಗಳಲ್ಲಿ)

ಆರ್ಥಿಕ ವರ್ಷ	ಬಾಕಿ ಬಿಲ್ಲು
2002–03	ರೂ. 2182.46
2003–04	ರೂ. 3367.43
2004–05	ರೂ. 3921.58

ಆ. ನೀರಾವರಿ ಸಾಮರ್ಥ್ಯ ಕಲ್ಪಿಸುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಲೈನಿಂಗ್ ಇತ್ಯಾದಿ ಕಾಮಗಾರಿಗಳನ್ನು ಅನುದಾನ ಲಭ್ಯತೆಗೆ ಅನುಗುಣವಾಗಿ ಆದ್ಯತೆ ಮೇಲೆ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಇ. ಈ ವಲಯದ ಯೋಜನಾ ಕಾಮಗಾರಿಗಳನ್ನು ಅನುದಾನ ಲಭ್ಯತೆಗೆ ಅನುಗುಣವಾಗಿ ಪೂರ್ಣಗೊಳಿಸಲಾಗುವುದು. ಪ್ರಸ್ತುತ ಎಲ್ಲಾ ಯೋಜನಾ ಕಾಮಗಾರಿಗಳನ್ನು 2010–11 ನೇ ಸಾಲಿಗೆ ಪೂರ್ಣಗೊಳಿಸುವ ಕಾರ್ಯಕ್ರಮವಿರುತ್ತದೆ.

1600(2008) ಶ್ರೀ ಕ್ಯಾತ್‌ಸಂದ್ರ ಎನ್.ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ಜನಸಂದಣಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಈ ಹೆಚ್ಚುತ್ತಿರುವ ಜನಸಂದಣಿ ತಡೆಗಟ್ಟಲು ನಗರದ ಹೊರವಲಯಗಳಲ್ಲಿ ಉಪನಗರಗಳನ್ನು ನಿರ್ಮಿಸುವ ಯೋಜನೆಗಳು ಸರ್ಕಾರದ ಮುಂದೆ ಇದೆಯೇ? ಹಾಗಿದ್ದಲ್ಲಿ, ಎಲ್ಲೆಲ್ಲಿ ಉಪನಗರಗಳನ್ನು ನಿರ್ಮಿಸಲಾಗುವುದು?

ಇ. ಈ ಉಪನಗರಗಳ ನಿರ್ಮಾಣಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವ ಯಾವ ಹಂತದಲ್ಲಿವೆ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಯವರು) :

ಅ. ಹೌದು

ಆ. ಇಲ್ಲಿ ಆದಕಾರಣ ಉಪನಗರಗಳ ನಿರ್ಮಾಣದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

1601 (2009) ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ತುಮಕೂರು ಜಿಲ್ಲೆಯಲ್ಲಿ ಒಳನಾಡು ಮೀನುಗಾರಿಕೆಗಾಗಿ ಗುರುತಿಸಲಾದ ಕೆರೆಗಳಾವುವು;

ಆ. ಇವುಗಳಲ್ಲಿ ಎಷ್ಟು ಕೆರೆಗಳನ್ನು ಮೀನುಗಾರಿಕೆಗೆ ಗುತ್ತಿಗೆ ನೀಡಲಾಗಿದೆ; ವಿಧಾನಸಭಾ ಕ್ಷೇತ್ರವಾರು ಗುತ್ತಿಗೆದಾರರ ವಿವರ ನೀಡುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ. ತುಮಕೂರು ಜಿಲ್ಲೆಯಲ್ಲಿ ಮೀನುಗಾರಿಕೆಗಾಗಿ ಗುರುತಿಸಿದ ಕೆರೆಗಳು 451 (ವಿವರಗಳನ್ನು ಅನುಬಂಧ–I ರಲ್ಲಿ ನೀಡಲಾಗಿದೆ.

ಆ. 20 ಕೆರೆಗಳನ್ನು ಗುತ್ತಿಗೆಗೆ ನೀಡಲಾಗಿದ್ದು ವಿವರಗಳನ್ನು ಅನುಬಂಧ–II ರಲ್ಲಿ ನೀಡಲಾಗಿದೆ.